# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1196 |
| ಸದಸ್ಯರ ಹೆಸರು | : ಶ್ರೀ ಎನ್.ಅಪ್ಪಾಜಿಗೌಡ |
| ಉತ್ತರಿಸುವ ದಿನಾಂಕ | : 20.12.2018 |
| ಉತ್ತರಿಸುವ ಸಚಿವರು | : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು. |

| ಕ್ರಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯಾದ್ಯಾಂತ ಎಷ್ಟು ಬಾಲಭವನ ಕೇಂದ್ರಗಳಿವೆ; (ತಾಲ್ಲೂಕು ಹಾಗೂ ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಒಟ್ಟು 30 ಜಿಲ್ಲೆಗಳಲ್ಲಿ ಹಾಗೂ 182 ತಾಲ್ಲೂಕುಗಳಲ್ಲಿ ಬಾಲ ಭವನದ ಚಟುವಟಿಕೆಗಳು ನಡೆಯುತ್ತವೆ. |
| ಆ | ಬಾಲಭವನಗಳು ಪ್ರಸ್ತುತ ಎಷ್ಟು ಸ್ವಂತ: ಕಟ್ಟಡಗಳಲ್ಲಿ ನಡೆಯುತ್ತಿವೆ ಮತ್ತು ಖಾಸಗಿ ಕಟ್ಟಡಗಳಲ್ಲಿ ನಡೆಯುತ್ತಿರುವ ಬಾಲ ಭವನಗಳ ಸಂಖ್ಯೆ ಎಷ್ಟು; (ತಾಲ್ಲೂಕು ಹಾಗೂ ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಸ್ವಂತ ಕಟ್ಟಡ ಹೊಂದಿರುವ ಬಾಲ ಭವನ ಕೇಂದ್ರಗಳು ಈ ಕೆಳಕಂಡತಿವೆ. |

**ಜಿಲ್ಲಾ ಕೇಂದ್ರಗಳು**

| ಕ್ರ.ಸಂ | | ಕ್ರ.ಸಂ | |
|---|---|---|---|
| 1 | ಬೆಂಗಳೂರು (ನಗರ) | 11 | ದಾವಣಗೆರೆ |
| 2 | ಬಾಗಲಕೋಟೆ | 12 | ದಕ್ಷಿಣ ಕನ್ನಡ |
| 3 | ಬಿಜಾಪುರ | 13 | ಕಲಬುರಗಿ(ನಗರ) |
| 4 | ಬೆಳಗಾವಿ(ನಗರ) | 14 | ಹಾವೇರಿ |
| 5 | ಬೀದರ್ | 15 | ತುಮಕೂರು |
| 6 | ಚಿಕ್ಕಮಗಳೂರು | 16 | ಉಡುಪಿ |
| 7 | ಚಿತ್ರದುರ್ಗ | 17 | ಯಾದಗಿರಿ |
| 8 | ಧಾರವಾಡ | 18 | ಉತ್ತರ ಕನ್ನಡ |
| 9 | ಚಾಮರಾಜನಗರ | 19 | ಮೈಸೂರು |
| 10 | ಮಂಡ್ಯ | | -- |

**ತಾಲ್ಲೂಕು ಕೇಂದ್ರಗಳು**

| ಕ್ರ.ಸಂ | | ಕ್ರ.ಸಂ | |
|---|---|---|---|
| 1 | ಮೂಡಿಗೆರೆ | 7 | ಮುಂಡರಗಿ |
| 2 | ಕೊಪ್ಪ | 8 | ಗುಂಡ್ಲುಪೇಟೆ |
| 3 | ಕಡೂರು | 9 | ದೇವದುರ್ಗ |
| 4 | ಕೂಡ್ಲಿಗಿ | 10 | ಕನಕಪುರ |
| 5 | ಹೂವಿನಹಡಗಲಿ | 11 | ಮಳವಳ್ಳಿ |
| 6 | ಅಥಣಿ | | -- |

ಸ್ವಂತ ಕಟ್ಟಡ ಹೊಂದಿಲ್ಲದ ಜಿಲ್ಲೆಗಳಲ್ಲಿ ಆಯಾ ಜಿಲ್ಲೆಯ ಕಾರ್ಯದರ್ಶಿರವರ (ಉಪ ನಿರ್ದೇಶಕರು ಮಮಅ ಇಲಾಖೆ) ಕಛೇರಿಯಲ್ಲಿ ಹಾಗೂ ಸಂಬಂಧಿಸಿದ ಆಯಾ ತಾಲ್ಲೂಕಿನ ಕಾರ್ಯದರ್ಶಿರವರ(ಸಿ.ಡಿ.ಪಿ.ಓ)ಕಛೇರಿಯಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಬಾಲ ಭವನದ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

...2

| | | |
|---|---|---|
| ಇ | ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಬಾಲಭವನಗಳ ವ್ಯಾಪ್ತಿಯ ಪ್ರದೇಶಗಳಲ್ಲಿ ಮುಚ್ಚಿರುವ ಸರ್ಕಾರಿ ಶಾಲೆಗಳ ಕಟ್ಟಡಗಳನ್ನು ಬಳಸಿಕೊಳ್ಳುವ ಉದ್ದೇಶ ಸರ್ಕಾರದ ಮುಂದಿದೆಯೇ; | ಬಾಡಿಗೆ ಕಟ್ಟಡಗಳಲ್ಲಿ ಬಾಲ ಭವನದ ಚಟುವಟಿಕೆಗಳು ನಡೆಯುತ್ತಿರುವುದಿಲ್ಲ. ಮುಚ್ಚಿರುವ ಸರ್ಕಾರಿ ಶಾಲಾ ಕಟ್ಟಡಗಳನ್ನು ಬಾಲಭವನದ ಚಟುವಟಿಕೆಗಳಿಗಾಗಿ ಬಳಸುವ ಪ್ರಸ್ತಾವನೆ ಸಧ್ಯಕ್ಕೆ ಇರುವುದಿಲ್ಲ. |
| ಈ | ಬಾಲ ಭವನ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುವ ಖಾಯಂ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು? (ತಾಲ್ಲೂಕು ಹಾಗೂ ಜಿಲ್ಲಾವಾರು ಮಾಹಿತಿ ನೀಡುವುದು) | ಬೆಂಗಳೂರಿನ ಕೇಂದ್ರ ಬಾಲ ಭವನದಲ್ಲಿ 36 ಖಾಯಂ ಸಿಬ್ಬಂದಿಗಳು ಹಾಗೂ 7 ಸಿಬ್ಬಂದಿಗಳು ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.<br><br>ರಾಜ್ಯದ ಎಲ್ಲಾ ಜಿಲ್ಲಾ ಬಾಲ ಭವನಗಳಲ್ಲಿ ಪ್ರತಿ ಜಿಲ್ಲೆಗೆ ಒಬ್ಬರು ಕಾರ್ಯಕ್ರಮ ಸಂಯೋಜಕರು ಹಾಗೂ ಒಬ್ಬ ಕಛೇರಿ ಸಹಾಯಕರನ್ನು ಬಾಲ ಭವನದ ಯೋಜನೆ ಅನುಷ್ಠಾನಗೊಳಿಸಲು ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲು ಎಲ್ಲಾ ಜಿಲ್ಲಾ ಕೇಂದ್ರಗಳಿಗೆ ತಿಳಿಸಲಾಗಿರುತ್ತದೆ. ಈವರೆವಿಗೂ ಬೆಂಗಳೂರು(ಗ್ರಾ); ಬಿಜಾಪುರ; ಬೆಳಗಾವಿ(ನಗರ); ಬೀದರ್; ಚಿತ್ರದುರ್ಗ; ಚಿಕ್ಕಬಳ್ಳಾಪುರ :ಧಾರವಾಡ; ದಕ್ಷಿಣ ಕನ್ನಡ; ಹಾವೇರಿ; ಮಂಡ್ಯ; ಗದಗ : ಹಾಸನ; ತುಮಕೂರು ; ಉಡುಪಿ; ಯಾದಗಿರಿ: ಕೊಡಗು: ಕೊಪ್ಪಳ: ರಾಮನಗರ: ಮತ್ತು ಶಿವಮೊಗ್ಗ ಜಿಲ್ಲೆ ಹೀಗೆ ಒಟ್ಟು 19 ಜಿಲ್ಲೆಗಳಲ್ಲಿ ನೇಮಕಗಳನ್ನು ಮಾಡಲಾಗಿರುತ್ತದೆ.<br><br>ಉಳಿದ 11 ಜಿಲ್ಲೆಗಳಲ್ಲಿ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br><br>ತಾಲ್ಲೂಕು ಬಾಲ ಭವನ ಕೇಂದ್ರಗಳಲ್ಲಿ ಯಾವುದೇ ಸಿಬ್ಬಂದಿ ಇರುವುದಿಲ್ಲ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಯಲ್ಲಿನ ಸಿಬ್ಬಂದಿಗಳಿಗೆ ಹೆಚ್ಚುವರಿ ಕಾರ್ಯಭಾರ ವಹಿಸಲಾಗಿರುತ್ತದೆ. |

**ಸಂಖ್ಯೆ: ಮಮಇ 62 ರಾಮಅ 2018**

(ಡಾ॥ ಜಯಮಾಲ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ,
ಹಿರಿಯ ನಾಗರೀಕರ ಸಬಲೀಕರಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು